**O.S.No.925/2008 - D.W.1**

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು. ದಿನಾಂಕಃ 08-07-2022.**

**ಪಾಟೀ ಸವಾಲು ವಾದಿಯ ಪರ ವಕೀಲರಿಂದ:**

**1)** ನಾನು ರಿಯಲ್ ಎಸ್ಟೇಟ್ ವ್ಯಾಪಾರ ಮಾಡುತ್ತೇನೆ. ನಾನು ಡಿಗ್ರಿ ವರೆಗೂ ಓದಿರುತ್ತೇನೆ. ಜಮೀನನ್ನು ಖರೀದಿಸುವಾಗ ಯಾವ ಯಾವ ದಾಖಲೆಗಳನ್ನು ನೋಡಬೇಕೆಂಬ ಮಾಹಿತಿ ಇದೆ. ವಾದಿ ಏನೂ ಪರಿಹಾರ ಕೋರಿ ಈ ದಾವೆಯನ್ನು ಹಾಕಿದ್ದಾರೆ ಎಂದು ಗೊತ್ತು. ವಾದಿಯು ಈ ಆಸ್ತಿಯನ್ನು ದಿನಾಂಕ: 01-02-2007 ರಂದು ನಾರಾಯಣಸ್ವಾಮಿ ಎಂಬುವವರಿಂದ ಖರೀದಿ ಹಿಡಿದ್ದೇನೆ ಎಂದು ಘೋಷಿಸಲು ಪರಿಹಾರ ಕೋರಿ ದಾವೆ ಹಾಕಿದ್ದಾರೆ ಎಂದರೆ ಸರಿ. ದಿನಾಂಕ: 08-02-2007 ರ ಕ್ರಯಪತ್ರ ಊರ್ಜಿತವಲ್ಲ ಎಂದು ಘೋಷಿಸಲು ಸಹ ಕೋರಿದ್ದಾರೆ ಎಂದರೆ ಸರಿ. ಈ ವಾದಪತ್ರದಲ್ಲಿರುವ ಮಾಹಿತಿಗಳು ತಪ್ಪು ಎಂದು ಹೇಳಿ ನಾನು ಪ್ರತ್ಯೇಕವಾಗಿ ನನ್ನ ಪ್ರತಿವಾದ ಪತ್ರ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಮಾತ್ರ ಪ್ರತಿವಾದ ಪತ್ರ ಸಲ್ಲಿಸಿದ್ದು ಅದನ್ನು ನಾನು ಮೆಮೋ ಮೂಲಕ ಅಳವಡಿಸಿಕೊಂಡಿದ್ದೇನೆ ಎಂದರೆ ನನಗೆ ಈಗ ನೆನಪಿಗೆ ಬರುತ್ತಿಲ್ಲ.

**2)** ನಾನು 1 ನೇ ಪ್ರತಿವಾದಿ ಇಂದ ಕ್ರಯಕ್ಕೆ ಪಡೆಯುವಾಗ ಯಾವ ಯಾವ ದಾಖಲೆಯನ್ನು ನೋಡಿದ್ದೇನೆ ಎಂದರೆ ಸಾಕ್ಷಿಯು ಎಲ್.ಆರ್.ಎಫ್. ಆದೇಶ, ಮ್ಯುಟೇಶನ್, ವಿಭಾಗದ ದಾಖಲೆ ಮತ್ತು ಹಳೆ ಪಹಣಿಗಳನ್ನು ನೋಡಿದ್ದೇನೆ ಎಂದು ಹೇಳುತ್ತಾರೆ. ಋಣಭಾರ ಪತ್ರವನ್ನು ಸಹ ನೋಡಿದ್ದೇನೆ. ದಿನಾಂಕ: 01-07-2007 ರ ಕ್ರಯಪತ್ರದ ಬಗ್ಗೆ ಸದರಿ ಋಣಭಾರ ಪತ್ರದಲ್ಲಿ ಮಾಹಿತಿ ಇತ್ತು ಎಂದರೆ ಸಾಕ್ಷಿಯು ನಾನು ಕ್ರಯಕ್ಕೆ ಪಡೆಯುವ ಒಂದು ವಾರದ ಮೊದಲು ಪಡೆದ ಋಣಭಾರ ಪತ್ರದಲ್ಲಿ ಆ ಮಾಹಿತಿ ಇರಲಿಲ್ಲ ಎಂದು ಹೇಳುತ್ತಾರೆ. ಸದರಿ ಋಣಭಾರ ಪತ್ರವನ್ನು ಹಾಜರುಪಡಿಸಿದ್ದೀನೋ ಇಲ್ಲವೋ ಎಂದು ನನಗೆ ನೆನಪಿಲ್ಲ.

**3)** ನಿ.ಪಿ.18 ರಲ್ಲಿ ದಿನಾಂಕ: 01-02-2007 ರ ಕ್ರಯಪತ್ರ ಇದೆ ಎಂದರೆ ಸರಿ. ಅದರ ಕೆಳಗಡೆ ನಮ್ಮ ಕ್ರಯಪತ್ರದ ಮಾಹಿತಿ ಇದೆ ಎಂದರೆ ಸರಿ. ಶಾಂತಮ್ಮ ಮುನಿಶಾಮಪ್ಪನ ಮುಕ್ತಿಯರ್ ಕಡೆಯಿಂದ ದಿನಾಂಕ: 01-02-2007 ರಂದು ಕ್ರಯಕ್ಕೆ ಪಡೆದ ಬಗ್ಗೆ ಮಾಹಿತಿ ಇದ್ದರೂ ವಾದಿಗೆ ಮೋಸ ಮಾಡುವ ಉದ್ದೇಶದಿಂದ ಸದರಿ ಮುನಿಶಾಮಪ್ಪನ ಕಡೆಯಿಂದ ನಾವು ಕ್ರಯಪತ್ರ ಬರೆಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ವಾದಿಗಳು ಮತ್ತು ನಾವು ಹಾಜರುಪಡಿಸಿರುವ ಪಹಣಿ ಪತ್ರಿಕೆಗಳ ಪ್ರಕಾರ ಈ ಆಸ್ತಿ ಮುನಿಶಾಮಪ್ಪನಿಗೆ ಭಾಗದಲ್ಲಿ ಬಂದಿದೆ ಎಂದರೆ ಸರಿ. ನಾವು ಹಾಜರುಪಡಿಸಿರುವ ಪಹಣಿಯಲ್ಲಿ ಮುನಿಶಾಮಪ್ಪ ತಂದೆ ನಂಜಪ್ಪ ಎಂಬುವವನ ಹೆಸರು ಮಾತ್ರ ಇದೆ ಎಂದರೆ ಸರಿ.

**4)** ದಾವಾ ಆಸ್ತಿಯ ಪೂರ್ವಕ್ಕೆ - ನಂಜೇಗೌಡ ಮತ್ತು ದೇವರಾಜಪ್ಪನ ಆಸ್ತಿ. ಸದರಿಯವರು ಮುನಿಆಂಜಿನಪ್ಪನ ಮಕ್ಕಳು ಎಂದರೆ ಗೊತ್ತಿಲ್ಲ. ಮುನಿಆಂಜಿನಪ್ಪ ಯಾರು ಎಂದು ಈಗ ನೆನಪಿಲ್ಲ. ನಾನು 1 ಎಕರೆ 16 ಗುಂಟೆ ಮತ್ತು 26 ಗುಂಟೆಗೆ ಪೋಡಿ ಮಾಡಿಸಿಕೊಂಡಿದ್ದೇನೆ. ಸದರಿ 1 ಎಕರೆ 16 ಗುಂಟೆ ಮೊದಲು ಆಂಜಿನಪ್ಪನಿಗೆ ಸೇರಿದ್ದು. ಪೂರ್ವಕ್ಕೆ - ಮುನಿಆಂಜಿನಪ್ಪನ ಆಸ್ತಿ ಇದ್ದರೂ ಅದನ್ನು ದಾರಿ ತಪ್ಪಿಸಲು ಅವರ ಮಕ್ಕಳ ಆಸ್ತಿ ಇದೆ ಎಂದು ಹೇಳುತ್ತಿದ್ದೇನೆ ಎಂದರೆ ಸರಿ. ಪಶ್ಚಿಮಕ್ಕೆ - ದೇವೇನಹಳ್ಳಿ ಗಡಿ ಇದೆ ನಂತರ ಬಾಳಪ್ಪನ ಆಸ್ತಿ ಇದೆ ಎಂದರೆ ಸರಿ. ದಾರಿ ತಪ್ಪಿಸುವ ಉದ್ದೇಶದಿಂದ ನಮ್ಮ ಕ್ರಯಪತ್ರದಲ್ಲಿ ಪಶ್ಚಿಮಕ್ಕೆ ಮೊದಲು ಬಾಳಪ್ಪನ ಆಸ್ತಿ ಕಾಣಿಸಿ ನಂತರ ದೇವೇನಹಳ್ಳಿ ಗಡಿ ಕಾಣಿಸಿದ್ದೇವೆ ಎಂದರೆ ಸರಿಯಲ್ಲ. ಉತ್ತರಕ್ಕೆ - ಎಸ್. ಕುಮಾರ್ ರವರ ಆಸ್ತಿ. ಅವರು ಯಾರ ಮಕ್ಕಳು ಎಂದು ಈಗ ನೆನೆಪಿಲ್ಲ. ಸದರಿ ಎಸ್. ಕುಮಾರ್ ರವರು ಮುನಿಶಾಮಪ್ಪ ಮತ್ತು ಪಿಳಮ್ಮನ ಮಕ್ಕಳಾಗಿದ್ದು ದಾರಿ ತಪ್ಪಿಸಲು ಉತ್ತರಕ್ಕೆ ಎಸ್. ಕುಮಾರ್ ರವರ ಆಸ್ತಿ ಎಂದು ಕಾಣಿಸಿದ್ದೇವೆ ಎಂದರೆ ಸರಿಯಲ್ಲ.

**5)** ಕ್ರಯಪತ್ರವನ್ನು ದಿನಾಂಕ: 08-02-2007 ರಲ್ಲಿಯೇ ಬರೆಸಿಕೊಂಡಿದ್ದರು ಅದನ್ನು ದಿನಾಂಕ: 03-03-2007 ರಂದು ನೊಂದಾಯಿಸಲಾಗಿದೆ ಎಂದರೆ ನೆನಪಿಲ್ಲ. ವಾದಿಗೆ ಕ್ರಯಪತ್ರ ಆಗಿದ್ದು ಗೊತ್ತಿದ್ದರು ಮುನಿಶಾಮಪ್ಪನ ಕಡೆಯಿಂದ ಸುಳ್ಳು ಪಿರ್ಯಾದಿ ನೀಡಿದ್ದೇವೆ ಎಂದರೆ ಸರಿಯಲ್ಲ. ಆ ಪಿರ್ಯಾದಿಯನ್ನು ವಜಾ ಮಾಡಿದ ನಂತರ ನಾನು ಮತ್ತು ಮುನಿಶಾಮಪ್ಪ ನಿ.ಪಿ.23 ರಂತೆ ಖಾಸಗಿ ಪಿರ್ಯಾದಿ ಸಲ್ಲಿಸಿದ್ದೇವೆ ಎಂದರೆ ಮುನಿಶಾಮಪ್ಪ ಸಲ್ಲಿಸಿದ್ದಾರೆ ಎಂದು ಹೇಳುತ್ತಾರೆ. ಸದರಿ ಪಿರ್ಯಾದಿಯನ್ನು ದಿನಾಂಕ: 19-02-2007 ರಂದು ಹಾಕಿದ್ದಾರೆ ಎಂದರೆ ಮುನಿಶಾಮಪ್ಪನಿಗೆ ಗೊತ್ತು. ನಿ.ಪಿ.21 ರಂತೆ ಪ್ರಥಮ ವರ್ತಮಾನ ವರದಿ ಆಗುತ್ತದೆ ಎಂದರೆ ನನಗೆ ಗೊತ್ತಿಲ್ಲ. ಅದನ್ನು ದಿನಾಂಕ: 03-04-2007 ರಂದು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಪ್ರಕರಣದಲ್ಲಿ ನಾನು ಪೋಲಿಸರ ಮುಂದೆ ಹೇಳಿಕೆ ನೀಡಿಲ್ಲ. ಯಾರು ಯಾರು ಹೇಳಿಕೆ ನೀಡಿದ್ದಾರೆ ಎಂದು ನನಗೆ ಮಾಹಿತಿ ಇದೆ ಎಂದರೆ ನನಗೆ ಈಗ ನೆನಪಿಲ್ಲ.

**6)** ನಿ.ಪಿ.22 ರಂತೆ ಪೋಲಿಸಿನವರು ಯಾವುದೇ ಹುರಳಿಲ್ಲ ಎಂದು ಬಿ - ವರದಿ ನೀಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಬಿ - ವರದಿಯ ಮೇಲೆ ತಕರಾರು ಸಲ್ಲಿಸಿಲು ಮುನಿಶಾಮಪ್ಪನಿಗೆ ಕಾಲಾವಕಾಶವನ್ನು ದಿನಾಂಕ: 19-07-2007 ರಲ್ಲಿ ನೀಡಲಾಯಿತು ಎಂದರೆ ನನಗೆ ನೆನಪಿಲ್ಲ. ಮುನಿಶಾಮಪ್ಪ ತೀರಿಹೋಗಿದ್ದಾರೆ ಯಾವಾಗ ಎಂದು ನೆನಪಿಲ್ಲ. ದಿನಾಂಕ: 19-07-2007 ರಿಂದ ದಿನಾಂಕ: 22-05-2013 ರವರೆಗೂ ಕಾಲಾವಕಾಶ ನೀಡಿದ್ದರು ಸದರಿ ಮುನಿಶಾಮಪ್ಪ ತಕರಾರು ಸಲ್ಲಿಸಿಲ್ಲ ಎಂದರೆ ಗೊತ್ತಿಲ್ಲ. ದಿನಾಂಕ: 06-09-2013 ರವರೆಗೂ ಕಾಲಾವಕಾಶ ನೀಡಿದ್ದರೂ ತಕರಾರು ಸಲ್ಲಿಸಿದೇ ಇರುವುದರಿಂದ ಸದರಿ ಬಿ - ವರದಿಯನ್ನು ಅಂಗೀಕರಿಸಿದ್ದಾರೆ ಎಂದರೆ ನನೆ ಗೊತ್ತಿಲ್ಲ. ದಿನಾಂಕ: 06-09-2013 ರಿಂದ ಇಲ್ಲಿಯವರೆಗೂ ಸದರಿ ಮುನಿಶಾಮಪ್ಪ ಮಾಡಿರುವ ಆರೋಪಗಳು ಸತ್ಯ ಎಂದು ತೋರಿಸಲು ಯಾವುದೇ ಪ್ರಯತ್ನ ಮಾಡಿಲ್ಲ ಎಂದರೆ ನನಗೆ ಗೊತ್ತಿಲ್ಲ. ಈ ನ್ಯಾಯಾಲಯದಿಂದ ಸಮಸ್ಸ್ ಬಂದ ಮೇಲೆ ಮಾತ್ರ ನನಗೆ ಗೊತ್ತಿರುತ್ತದೆ ಎಂದುಹೇಳುತ್ತಾರೆ.

**7)** ವಾದಿಯು ನಮಗಿಂತ ಮೊದಲು ಖರೀದಿ ಹಿಡಿದಿರುವ ಬಗ್ಗೆ ನನಗೆ ಯಾವಾಗ ಗೊತ್ತಾಯಿತು ಎಂದರೆ ಸಾಕ್ಷಿಯು 2008 ರಲ್ಲಿ ಗೊತ್ತಾಯಿತು ಎಂದು ಹೇಳುತ್ತಾರೆ. ವಾದಿಯ ಕ್ರಯಪತ್ರವನ್ನು ರದ್ದುಪಡಿಸಲು ನಾನು ಯಾವುದೇ ಕ್ರಮ ಕೈಗೊಂಡಿಲ್ಲ, ದಾವೆ ನಡೆಯುತ್ತಿದೆ. ಸ.ನಂ.55/1 – 55/7 ಆಗಲು ಪೋಡಿ ಕ್ರಮವನ್ನು ಸುಮಾರು 3 ವರ್ಷಗಳ ಹಿಂದೆ ಕೈಗೊಂಡಿದ್ದೇನೆ. ತಹಶೀಲ್ದಾರ್ ರವರಿಗೆ ದಾಖಲೆ ಸಮೇತ ಪೋಡಿ ಮಾಡಲು ಅರ್ಜಿ ನೀಡಿದ್ದೇವು. ಆ ಅರ್ಜಿಯ ಮೇಲೆ ತಹಶೀಲ್ದಾರ್ ರವರು ಕ್ರಮ ಕೈಗೊಳ್ಳುವಾಗ ಆ ಆಸ್ತಿಯ ಅಕ್ಕಪಕ್ಕದವರಿಗೆ ನೋಟೀಸ್ ನೀಡಬೇಕು ಎಂದರೆ ಸರಿ. ಪೋಡಿ ಆಗುವಾಗ ಮಾಡಿದ ಸರ್ವೆ ಕಾರ್ಯದಲ್ಲಿ ನೀಡಿದ ನೋಟೀಸ್ ಗಳನ್ನು ನಾನು ನ್ಯಾಯಾಲಯಕ್ಕೆ ನೀಡಿದ ಬಗ್ಗೆ ನನಗೆ ನೆನಪಿಲ್ಲ. ನಾವು ಯಾರಿಗೂ ನೋಟೀಸ್ ನೀಡಿಲ್ಲ ಗುಪ್ತವಾಗಿ ನಾವು ಮತ್ತು ಕಂದಾಯ ಅಧಿಕಾರಿಗಳು ಸೇರಿ ಕಛೇರಿಯಲ್ಲಿ ಸದರಿ ದಾಖಲೆಗಳನ್ನು ತಯಾರಿಸಿದ್ದೇವೆ ಎಂದರೆ ಸರಿಯಲ್ಲ. ಆದ್ದರಿಂದಲೇ ಆ ದಾಖಲೆಗಳನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ.

**8)** ನಿ.ಪಿ.28 ರಿಂದ ನಿ.ಡಿ.33 ರ ದಾಖಲೆಗಳಲ್ಲಿ ಎಂ.ಆರ್.ಟಿ.20/2015-16 ವಿಭಜನೆ ಎಂದು ಕಾಣುತ್ತಿದೆ ಅದು ಯಾರ ಯಾರ ಮಧ್ಯೆ ವಿಭಾಗ ಆಗಿದೆ ಎಂದರೆ ನನಗೆ ಈಗ ನೆನಪಿಲ್ಲ ಎಂದು ಹೇಳುತ್ತಾರೆ. ನಿ.ಪಿ.26 ಮತ್ತು ನಿ.ಡಿ.27 ಕ್ಕೂ ಹಾಗೂ ನಿ.ಡಿ.28 ರಿಂದ ನಿ.ಡಿ.33 ಕ್ಕೂ ಯಾವುದೇ ತಾಳೆ ಇಲ್ಲ ನಮಗೆ ಮನಸ್ಸಿಗೆ ಬಂದ ಹಾಗೆ ಬರೆಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ಕಂದಾಯ ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ನಿ.ಡಿ.34 ಮತ್ತು ನಿ.ಡಿ.35 ನ್ನು ಸಹ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿದ ನಿ.ಡಿ.36 ರ ಆದೇಶದ ಪ್ರಕಾರ ಈಗಾಗಲೇ ಪ್ರಕರಣ ನ್ಯಾಯಾಲಯದಲ್ಲಿ ಇದೆ ಎಂದು ವಜಾ ಆಗಿದೆ ಎಂದರೆ ಸರಿ. ನನ್ನ ಮಾಲೀಕತ್ವವನ್ನು ಯಾವುದೇ ನ್ಯಾಯಾಲಯ ಘೋಷಿಸಿಲ್ಲ.

**9)** ವಾದಿಯ ಕ್ರಯಪತ್ರವನ್ನು ರದ್ದುಪಡಿಸಿ ಅವರು ಸ್ವಾಧೀನದಲ್ಲಿ ಇಲ್ಲ ಎಂದು ಯಾವುದಾದರೂ ನ್ಯಾಯಾಲಯ ಹೇಳಿದ ಬಗ್ಗೆ ನನಗೆ ನೆನಪಿಲ್ಲ. ವಾದಿ ಖರೀದಿ ಹಿಡಿದ ದಿನದಿಂದ ಅವರೇ ಮಾಲೀಕರು ಮತ್ತು ಸ್ವಾಧೀನದಾರರು ಮತ್ತು ಅವರೇ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ವಾದಿ ಖರೀದಿ ಹಿಡಿದು ಸ್ವಾಧೀನದಲ್ಲಿ ಇದ್ದದ್ದು ಗೊತ್ತಿದ್ದರೂ ಅವರಿಗೆ ಮೋಸ ಮಾಡಲು ಮುನಿಶಾಮಪ್ಪ ಮತ್ತು ನಾನು ನನ್ನ ಹೆಸರಿಗೆ ಕ್ರಯಪತ್ರ ಮಾಡಿಕೊಂಡು ಉಳಿದ ದಾಖಲೆಗಳನ್ನು ಸೃಷ್ಟಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನನ್ನ ಸಾಕ್ಷಿ ವಿಚಾರಣೆಯನ್ನು ನನ್ನ ಪರವಾಗಿ ಮಾತ್ರ ನೀಡಿದ್ದೇನೆ. ಈ ಆಸ್ತಿಯ ಮೇಲೆ ನನಗೆ ಯಾವುದೇ ಮಾಲೀಕತ್ವ ಮತ್ತು ಸ್ವಾಧೀನತೆ ಇರದೇ ಇದ್ದರೂ ವಾದಿಗೆ ಮೋಸ ಮಾಡಲು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**10)** ನಿ.ಡಿ.20 - ಪತ್ರಿಕೆ ಕೇವಲ ಬೆಂಗಳೂರಿನಲ್ಲಿ ಮಾತ್ರ ವಿತರಣೆ ಆಗುತ್ತದೆ ದೇವನಹಳ್ಳಿ ತಾಲ್ಲೂಕಿನಲ್ಲಿ ವಿತರಣೆ ಆಗುವುದಿಲ್ಲ ಕೇವಲ ಮೋಸ ಮಾಡುವ ಉದ್ದೇಶದಿಂದಲೇ ಸಂಜೆವಾಣಿ ಪತ್ರಿಕೆಯಲ್ಲಿ ನೋಟೀಸ್ ಹೊರಡಿಸಿದ್ದೇವೆ ಎಂದರೆ ಸರಿಯಲ್ಲ.

**11)** **ಮರು ವಿಚಾರಣೆ ಇಲ್ಲ.**

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ.ಕೇ.ಸ.ಇ. ಎಂದು ಒಪ್ಪಿಕೊಂಡಿರುತ್ತಾರೆ,

**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ.**